





### ಯಕ್ಷಗಾನ-ಪ್ರಾತಿನಿಧಿಕ ಕಲೆ

ಯಕ್ಷಗಾನ ಪ್ರದರ್ಶನವನ್ನು ಸಾಮಾನ್ಯವಾಗಿ ಕರ್ನಾಟಕದ ಸಾಂಸ್ಕೃತಿಕ ಕ್ಷೇತ್ರದ ಪ್ರಾತಿನಿಧಿಕ ಕಲೆಯೆಂದು ಬಿಂಬಿಸಲಾಗುತ್ತದೆ. ಆದರೆ ಯಕ್ಷಗಾನ ಸಾಹಿತ್ಯವನ್ನು ಪರಿಗಣಿಸಿದ್ದು ಕಡಿಮೆ. ಇಂದಿಗೂ ಅದೆಷ್ಟೋ ಮಂದಿ ಗ್ರಾಮೀಣ ಪ್ರತಿಭಾವಂತ ಕವಿಗಳು ಯಕ್ಷಗಾನ ಪ್ರಸಂಗವನ್ನು ಬರೆಯುತ್ತಾರೆ. ಛಂದೋಬದ್ಧವಾಗಿ ಬರೆಯುವುದನ್ನು ಶ್ರಮಪಟ್ಟು ಕಲಿತು ಕಾವ್ಯ ರಚನೆ ಮಾಡುತ್ತಾರೆ. ರಂಗಸ್ಥಳದಲ್ಲಿ ಮಾತನಾಡುವ ಸಾಹಿತ್ಯವು ಆಶುಮಾತುಗಳಾದರೂ, ಕಾವ್ಯ ರಚನೆಯ ಪ್ರಕ್ರಿಯೆಯು ಇಷ್ಟೊಂದು ಛಂದೋಬದ್ಧವಾಗಿ ಉಳಿದಿರುವುದು ಯಕ್ಷಗಾನದಲ್ಲಿಯೇ. ತಾಳಮದ್ದಳೆಯು ವಿಮರ್ಶೆಯ ಮತ್ತೊಂದು ಮಗ್ಗುಲನ್ನೇ ತೆರೆದಿಡುತ್ತದೆ. ಇದು ಸಾಂಸ್ಕೃತಿಕ ಆಯಾಮವನ್ನೂ ಸಾಹಿತ್ಯಿಕ ಆಯಾಮವನ್ನೂ ಒಟ್ಟಾಗಿ ಕಟ್ಟಿಕೊಡುವ ಕಲಾಪ್ರಕಾರವಾದ್ದರಿಂದ ಕನ್ನಡಕ್ಕೆ ಇದರಿಂದ ದೊರೆತ ಲಾಭ ದೊಡ್ಡದು.

**-ಕೆರೆಮನೆ ಶಿವಾನಂದ ಹೆಗಡೆ,** ಯಕ್ಷಗಾನ ವಿದ್ವಾಂಸರು

### ಕರುಳಬಳ್ಳಿಯಾಗಿ ಕನ್ನಡದ ಬಳ್ಳಿ

ಕನ್ನಡ ನೆಲದ ಸಮುದಾಯಗಳು ತಮ್ಮ ಮಾತೃಭಾಷೆಯ ಮಹತ್ವವನ್ನು ಮುಂದಿನ ತಲೆಮಾರಿಗೆ ಸಂವಹಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತಲೇ, ತಮ್ಮ ಸಾಮುದಾಯಿಕ ವಿಚಾರಗಳ ಬಗ್ಗೆ ಕನ್ನಡಿಗರಿಗೆ ಹೇಳುವ ಕೆಲಸವನ್ನು ಮಾಡುತ್ತಾ ಬಂದಿವೆ. ಸಾಹಿತ್ಯವಿರಬಹುದು, ಅಥವಾ ಸಾಂಸ್ಕೃತಿಕ ಕ್ಷೇತ್ರವಿರಬಹುದು, ಮೈಮನಸಿಗೆ ಆಪ್ತವಾದ ತಮ್ಮ ಅಸ್ಮಿತೆಯನ್ನು ವಿವರಿಸುವ ಪ್ರಕ್ರಿಯೆಗೆ ಕನ್ನಡ ಭಾಷೆ ಅಥವಾ ಕನ್ನಡಲಿಪಿಯು ಆಸರೆಯಾಗಿ ನಿಂತಿದ್ದು, ಇದರಿಂದಾಗಿ ಕನ್ನಡಧಾರೆಯು ಮತ್ತಷ್ಟು ಸಬಲಗೊಂಡಿದೆ.

ಉದಾಹರಣೆಗೆ, ಕಾಸರಗೋಡು, ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಹಾಗೂ ಚಿಕ್ಕಮಗಳೂರಿನ ಕೆಲ ಭಾಗಗಳಲ್ಲಿ ಆಡುನುಡಿಯಾಗಿರುವ ತುಳುಭಾಷೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಗಮನಿಸಬಹುದು. ಯಕ್ಷಗಾನ, ದೈವಾರಾಧನೆ, ಕಂಬಳ ಮುಂತಾದ ಸಾಂಸ್ಕೃತಿಕ ಆಚರಣೆಗಳು ಕರ್ನಾಟಕ ನೆಲದ ಪ್ರಾತಿನಿಧಿಕ ಕಲಾಪ್ರಕಾರಗಳಾಗಿ ನಾಡಿನ ಹೊರಭಾಗದಲ್ಲಿಯೂ ಗುರುತಿಸಿಕೊಂಡಿವೆ. ಅದೇ ರೀತಿ ತುಳುಸಾಂಸ್ಕೃತಿಕ ಹಿನ್ನೆಲೆಯಲ್ಲಿ ಮೂಡಿಬಂದ ಗದ್ಯಸಾಹಿತ್ಯವಾಗಲೀ, ಕಾವ್ಯವಾಗಲೀ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಬಗೆಯನ್ನು ಮರೆಯುವಂತಿಲ್ಲ. ಪಾಡ್ದನ, ಸಿರಿ ಮಹಾಕಾವ್ಯ, ಯಕ್ಷಗಾನ, ಭೂತಾರಾಧನೆ, ಕಂಬಳ ಕುರಿತು ಸಂಶೋಧನಾತ್ಮಕ ಬರಹಗಳ ಬೃಹತ್ ವಿಭಾಗ ಒಂದೆಡೆಯಾದರೆ, ಈ ಪರಿಸರದ ಮಧ್ಯದಿಂದ ಹುಟ್ಟಿಬಂದ ಕಥೆ, ಕಾವ್ಯದಂತಹ ಸೃಜನಶೀಲ ಕೃತಿಗಳ ಹರಹು ಮತ್ತೊಂದು. ಈ ವಿಸ್ತೃತ ಗ್ರಹಿಕೆಯನ್ನು